1.ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮ ನೀ |

ಸೌಭಾಗ್ಯದ ಲಕ್ಷ್ಮೀ ಬಾರಮ್ಮ || ಪ ||

ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ

ಗೆಜ್ಜೆ ಕಾಲ್ಗಳ ಧ್ವನಿಯ ತೋರುತ |

ಸಜ್ಜನ ಸಾಧು ಪೂಜೆಯ ವೇಳೆಗೆ

ಮಜ್ಜಿಗೆಯೊಳಗಿನ ಬೆಣ್ಣೆಯಂತೆ || ೧ ||

ಕನಕವೃಷ್ಟಿಯ ಕರೆಯುತ ಬಾರೆ

ಮನ ಕಾಮನೆಯ ಸಿದ್ಧಿಯ ತೋರೆ |

ದಿನಕರ ಕೋಟಿ ತೇಜದಿ ಹೊಳೆಯುವ

ಜನಕರಾಯನ ಕುಮಾರಿ ಬೇಗ || ೨ ||

ಅತ್ತಿತ್ತಳಗದೆ ಭಕ್ತರ ಮನೆಯಲಿ

ನಿತ್ಯ ಮಹೋತ್ಸವ ನಿತ್ಯ ಸುಮಂಗಲಿ |

ಸತ್ಯವ ತೋರುವ ಸಾಧು ಸಜ್ಜನರ

ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ || ೩ ||

ಸಂಖ್ಯೆಯಿಲ್ಲದ ಭಾಗ್ಯವ ಕೊಟ್ಟು

ಕಂಕಣ ಕೈಯ ತಿರುವುತ ಬಾರೆ |

ಕುಂಕುಮಾಂಕಿತ ಪಂಕಜಲೋಚನೆ

ವೆಂಕಟರಮಣನ ಬಿಂಕದ ರಾಣಿ || ೪ ||

ಸಕ್ಕರೆ ತುಪ್ಪದ ಕಾಲುವೆ ಹರಿಸಿ

ಶುಕ್ರವಾರದ ಪೂಜೆಯ ವೇಳೆಗೆ |

ಅಕ್ಕರೆವುಳ್ಳ ಅಳಗಿರಿ ರಂಗನ

ಚೊಕ್ಕ ಪುರಂದರ ವಿಠ್ಠಲನ ರಾಣಿ || ೫ ||

2.ಅಳುವದ್ಯಾತಕೊ ರಂಗ ಅತ್ತರಂಜಿಪ ಗುಮ್ಮ

ಪುಟ್ಟಿದೇಳು ದಿವಸದಲಿ ದುಷ್ಟ ಪೂತನಿಯ ಕೊಂದೆ

ಮುಟ್ಟಿ ವಿಷದ ಮೊಲೆಯುಂಡ ಕಾರಣ

ದೃಷ್ಟಿ ತಾಕಿತೆ ನಿನಗೆ ರಂಗಯ್ಯ

ಬಾಲಕತನದಿ ಗೋಪಾಲಕರೊಡಗೂಡಿ

ಕಾಳಿಂದಿ ಮಾಡುವನು ಕಲಕಿದ ಕಾರಣ

ಕಾಲು ಉಳುಕಿತೆ ನಿನಗೆ ರಂಗಯ್ಯ

ತುರುವ ಕಾಯಲು ಪೋಗೆ ಭರದಿ ಇಂದ್ರ ಮಳೆಗರೆಯೆ

ಬೆರಳಲಿ ಬೆಟ್ಟವನೆತ್ತಿದ ಕಾರಣ

ಬೆರಳು ಉಳುಕಿತೆ ನಿನಗೆ ರಂಗಯ್ಯ

ವಾಸುದೇವ ಸುತನಾಗಿ ಅಸುರರೆಲ್ಲರ ಮಡುಹಿ

ಹೆಸರಿನ ಮಲ್ಲರ ಮಡುಹಿದ ಕಾರಣ

ಕಿಸಿರು ತಾಕಿತೆ ನಿನಗೆ ರಂಗಯ್ಯ

ಶರಣು ವೇಲಾಪುರದ ಚೆಲುವ ಚೆನ್ನಿಗರಾಯ

ಪರಿಪರಿ ವಿಧದಿಂದ ಶರಣರ ಪೊರೆಯುವ ವರದ ಪುರಂದರವಿಠಲರಾಯ

3.ಶರಣು ಗಜಮುಖ ಆಖುವಾಹನ

ಶರಣು ಸುರಗಣ ಸೇವಿತ

ಶರಣು ಸಕಲಾಭೀಷ್ಟದಾಯಕ

ಶರಣು ವಿಘ್ನ ವಿನಾಯಕ || ೧ ||

ಹೇಮಖಚಿತ ಕಿರೀಟ ಕುಂಡಲ

ಕಾಮಿತಾರ್ಥ ಪ್ರದಾಯಕ

ಅಮಿತ ಸೌಲಭ್ಯ

ಪ್ರಬಲ ಶಾಸ್ತ್ರೋದ್ದಾಮ ವಿದ್ಯಾಶರನಿಧೇ || ೨ ||

ಪಾಶ ಮೋದಕ ಪರಶುಧರ

ಫಣಿಭೂಷ ಪಾರ್ವತಿ ನಂದನ

ವಾಸವಾರ್ಚಿತ ವಿಜಯವಿಠಲನ

ದಾಸ ಭೋ ಗಣನಾಯಕ || ೩ ||

4.ತೋಳು ತೋಳು ತೋಳು ರಂಗ ತೋಳನ್ನಾಡೈ ಸ್ವಾಮಿ |ನೀಲವರ್ಣದ ಬಾಲಕೃಷ್ಣನೆ ತೋಳನ್ನಾಡೈ ||ಪ||

ಹುಲಿಯುಗುರರಳೆಲೆ ಮಾಗಾಯಿಗಳನಿಟ್ಟ ತೋಳನ್ನಾಡೈ ಸ್ವಾಮಿ |ಘಲಿರೆಂಬಂದುಗೆ ಗೆಜ್ಜೆಲಿ ನಲಿವುತ್ತ ತೋಳನ್ನಾಡೈ |ನೆಲುವಿಗೆ ನಿಲುಕದೆ ಒರಳ ತಂದಿಟ್ಟ ತೋಳನ್ನಾಡೈ ಸ್ವಾಮಿ |ಚೆಲುವ ಮಕ್ಕಳ ಮುದ್ದು ಮಾಣಿಕವೆ ತೋಳನ್ನಾಡೈ ||

ಮಾತೆಯ ಪಿತನ ಅಣುಗನ ಮಡುಹಿದ ತೋಳನ್ನಾಡೈ| ಪೂತನಿಯೆಂಬವಳಸುವನೆ ಹೀರಿದ ತೋಳನ್ನಾಡೈ ಸ್ವಾಮಿ |ಮಾತಿಗೆ ಶಿಶುಪಾಲನ ಶಿರತರಿದ ತೋಳನ್ನಾಡೈ ಸ್ವಾಮಿ |ಶ್ರೀ ತುಲಸಿಯ ಪ್ರಿಯ ನಿತ್ಯವಿನೋದಿ ತೋಳನ್ನಾಡೈ ||

ದಟ್ಟಡಿಯಿಡುತಲೆ ಬೆಣ್ಣೆಯ ಮೆಲುವ ತೋಳನ್ನಾಡೈ ಸ್ವಾಮಿ |ಕಟ್ಟಿದ ಕರಡಿಯ ಕರುವೆಂದೆಳೆದ ತೋಳನ್ನಾಡೈ |ಬಟ್ಟಲ ಹಾಲ ಒಲ್ಲೆಂದು ಕಾಡಿದ ತೋಳನ್ನಾಡೈ ಸ್ವಾಮಿ |ಬಟ್ಟಲೊಳುಣವಿಸೆ ನಗುವಾತನೆ ತೋಳನ್ನಾಡೈ ||

ಸಜ್ಜನ ಸತ್ಯಕೆ ಧರ್ಮವ ನಡೆಸಿದ ತೋಳನ್ನಾಡೈ ಸ್ವಾಮಿ |ಅರ್ಜುನ ರಥಕೆ ಸಾರಥ್ಯ ಮಾಡಿದ ತೋಳನ್ನಾಡೈ |ಲಜ್ಜೆಗೇಡಾದ ದ್ರೌಪದಿ ಕಾಯ್ದ ತೋಳನ್ನಾಡೈ ಸ್ವಾಮಿ |ವಜ್ರಪಂಜರ ಪಾಂಡವಪ್ರಿಯ ತೋಳನ್ನಾಡೈ ||

ನಖದಿಂದ ಹಿರಣ್ಯಕನುದರ ಬಗಿದ ತೋಳನ್ನಾಡೈ ಸ್ವಾಮಿ |ಸುಖದಿಂದಲಿ ಪ್ರಹ್ಲಾದನ ಕಾಯ್ದ ತೋಳನ್ನಾಡೈ |ವಿಖಳಿತಗೆಡಿಸಿದ ಗೋಪಸ್ತ್ರೀಯರ ತೋಳನ್ನಾಡೈ |ಸ್ವಾಮಿ ಸುಖತೀರ್ಥರ ಪತಿ ಪುರಂದರವಿಠಲ ತೋಳನ್ನಾಡೈ ||

5.ಪಾಲಿಸಮ್ಮ ಮುದ್ದು ಶಾರದೆ |

ಎನ್ನ ನಾಲಿಗೆಯಲಿ ನಿಲ್ಲ ಬಾರದೆ ||

ಲೋಲಲೋಚನೆ ತಾಯಿ ನಿರುತ ನಂಬಿದೆ ನಿನ್ನ ||ಅಪ|| ಅಕ್ಷರಕ್ಷರ ವಿವೇಕವ | ನಿನ್ನ|

ಕುಕ್ಷಿಯೊಳೀರೇಳು ಲೋಕವ || ಸಾಕ್ಷತ್ ರೂಪದಿಂದ ಒಲಿದು ರಕ್ಷಿಸು ತಾಯೇ ||೧||

ಶೃಂಗಾರಪುರ ನೆಲೆವಾಸಿನೀ ದೇವೀ | ಸಂಗೀತ ಗಾನ ವಿಲಾಸಿನಿ || ಮಂಗಳ ಗಾತ್ರಳೆ ಭಳಿರೆ ಬ್ರಹ್ಮನ ರಾಣಿ ||೨||

ಸರ್ವಾಲಂಕಾರ ದಯಾಮೂರುತಿ ನಿನ್ನ ಚರಣವ ಸ್ತುತಿಸುವೆ ಕೀರುತಿ | ಗುರುಮೂರ್ತಿ ಪುರಂದರವಿಠಲನ್ನ ಸ್ತುತಿಸುವೆ ||೩||

6.ಅಂಬಿಗಾ ನಾ ನಿನ್ನ ನಂಬಿದೇ

ಜಗದಂಬಾರಮಣ ನಿನ್ನ ನಂಬಿದೆ

ತುಂಬಿದ ಹರಿಗೋಲಂಬಿಗಾ

ಅದಕೊಂಭತ್ತು ಛಿದ್ರನೋಡಂಬಿಗಾ

ಸಂಭ್ರಮದಿಂದ ನೀನಂಬಿಗಾ

ಅದರಿಂಬು ನೋಡಿ ನಡೆಸಂಬಿಗಾ

ಹೊಳೆಯ ಭರವ ನೋಡಂಬಿಗಾ

ಅದಕ್ಕೆ ಸೆಳವು ಘನವಯ್ಯ ಅಂಬಿಗಾ

ಸುಳಿಯೊಳು ಮುಳುಗಿದೆನಂಬಿಗಾ

ಎನ್ನ ಸೆಳೆದುಕೊಳ್ಳಯ್ಯಾ ನೀನಂಬಿಗಾ

ಆರು ತೆರೆಯ ನೋಡಂಬಿಗಾ

ಅದು ಮೀರಿ ಬರುತಲಿದೆ ಅಂಬಿಗಾ

ಯಾರಿಂದಲಾಗದು ಅಂಬಿಗಾ

ಅದ ನಿವಾರಿಸಿ ದಾಟಿಸೊ ಅಂಬಿಗಾ

ಹೊತ್ತುಹೋಯಿತು ನೋಡಂಬಿಗಾ

ಅಲ್ಲಿ ಮತ್ತೈವರೀರ್ವರು ಅಂಬಿಗಾ

ಒತ್ತಿ ನಡೆಸಿ ನೋಡಂಬಿಗಾ

ಎನ್ನ ಸತ್ಯ ಲೋಕಕಕೆ ಒಯ್ಯೊ ಅಂಬಿಗಾ

ಸತ್ಯವೆಂಬುದೆ ಹುಟ್ಟಂಬಿಗಾ

ಸದಾ ಭಕ್ತಿಎಂಬುದೆ ಪಥವಂಬಿಗಾ

ಮುಕ್ತಿದಾಯಕ ನಮ್ಮ ಪುರಂದರ ವಿಠ್ಠಲನ ಮುಕ್ತಿಮಂಟಪಕೊಯ್ಯೊ ಅಂಬಿಗಾ

7.ಗುರುವೇ ವರಹಜ ತಟ ವಾಸ ಪುರಿ ಮಂತ್ರದೀಶ || Pa ||

ಅರುಮೊರೆ ಇಡುವೆನೋ ವರಪದ ಪಧುಮಕೆ

ಕರುಣದಲ್ಲೇನ ಮನ ಹರಿಯಲ್ಲಿ ಇರಿಸೋ || A. PA||

ಭಾಗಿ ಭಜಿಪೇ ಗುರುವೇ ಎನ್ನಯ ರೋಗ ಹರಿಸು ಪ್ರಭುವೇ

ರಾಘವೇಂದ್ರ ಧುರಿ ತೌಧವಿ ಧೂರನೇ

ಭೋಗಿ ಶಯನ ಪಾದ ರಾಗಧಿ ಭಜಿಸುವ || 1 ||

ಭೂತ ಪ್ರೇತ ಭಾಧೆ ಬಿಡಿಸುವ ಛಾತಿ ನಿಮ್ಮದು ತಿಳಿದೇ

ಭೂತರೆನಿಪ ಜನ ಆತು ನಿಮ್ಮಪದ

ಪ್ರೀತಿ ಸೇವೆಯಲ್ಲಿ ತಾತುರರಿಹರೋ || 2 ||

ಮೌನಿವರ್ಯ ನಿನ್ನಾ ಬೇಡುವೆ ಜ್ಞಾನ ಭಕುತಿಯನ್ನಾ

ಧ್ಯಾನ ಮಾಡಿ ಅಜ್ಞ್ಯನವನೋಡಿಸೆ

ಹೀನ ಯೋನಿ ಬರಲೇನು ಅಂಜೇನೋ || 3 ||

ಪರಿಮಳಾರ್ಯರ್ ಎಂದು ನಿಮ್ಮಯ

ಬಿರುದು ಕೇಳಿ ಬಂದು

ಮೊರಯನಿಡುವೇ ತವ ಚರಣಂ ಬುರುಹಕೆ

ಅರವನೀಯೋ ತವ ಪರಿಮಳ ಸ್ವಭಗನು || 4 ||

ಗುರು ಸುಧೀಂದ್ರ ಕರಜ ತೋರ್ಪುದು

ಹರಿಯ ಪಾದ ವಿಸಜಾ

ವರ ಸುಹೃಧ್ಯ ಗುರು ಗೋವಿಂದ ವಿಠಲನ

ಚರಣ ಸರೋಜವ ನಿರುತ ಭಜಿಪ ಗುರು || 5 ||

**ತತ್ ತಕಧಿಮಿ ತತ್ ಧಿಮಿಕಿ ಎನುತ ಹರಿಯಾಡಿದನೆ ||ಪ||**

**ಚಿತ್ತಜಪಿತನುತ್ತಮ ಮುತ್ತಿನ ಗೊತ್ತುಗಳ್ ಕುತ್ತಿಯೊಳಗೆತ್ತ್ಯಾಡುತ ||ಅ||**

**ಹಾರ ಪದಕ ಕೇಯೂರ ಕಿರೀಟವು ಧೀರ ಬಾಹುಪುರಿಯದು**

**ವೀರ ಹೊಳೆಯುತಿರೆ ಮಾರಜನಕ ಸುಕುಮಾರ ಸಾರಗುಣಸಾಂದ್ರ ಮಹಿಮಹರಿ ||**

**ಮಂದಗಮನಯೆರು ಬೃಂದಬೃಂದದಲಿ ಚಂದ ನೋಡುತಿರೆ**

**ಆನಂದಗೋಪನ ಕಂದ ಮುಕುಂದ ನಿತ್ಯಾನಂದ ||**

**ಕಂಕಣ ವಂಕಿಯು ಕಿಂಕಿಣಿ ರವಗಳು ಶಂಖ ಚಕ್ರ ದಿವ್ಯ ಪಂಕಜಮಾಲೆಯು**

**ಶಂಖಗಳ ಶ್ರೀಪುರಂದರವಿಠಲ ವೇದಾಂತವೇದ್ಯ ಕೃಷ್ಣ ||**